ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರು(ಕಾಮಗಾರಿ), ವಾರ್ಡ್ ಸಂಖ್ಯೆ 137 [illegible]

**********************************************

ಸಂಖ್ಯೆ: W-137/Committee/Proceding-30/2021-22 dt. 05-01-2022

# ವಾರ್ಡ್ ಹಂತದ ಸಮಿತಿ ಸಭೆ

## ವಾರ್ಡ್ ಸಂಖ್ಯೆ 137

05-01-2022ರಂದು ಬೆಳಿಗ್ಗೆ 11.30 ಘಂಟೆಗೆ ವಾರ್ಡ್ ಸಂಖ್ಯೆ 137 ರಾಯಪುರಂ ವಾರ್ಡ್ ಹಂತದ ಸಮಿತಿ ಸಭೆಯನ್ನು ಶ್ರೀ. ಮೊಹಮದ್ ಜಾವೀದ್, ಸಹಾಯಕ ಕಾರ್ಯಪಾಲಕ ಅಭಿಯಂತರರು(ಕಾಮಗಾರಿ) ವಸಂತನಗರ ಉಪ ವಿಭಾಗ ಬಿ.ಬಿ.ಎಂ.ಪಿ ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡಲ್ ಅಧಿಕಾರಿ ವಾರ್ಡ್ ಸಂಖ್ಯೆ 137 ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿ ಅಧಿಕಾರ ಅವಧಿಯು ದಿನಾಂಕ: 10-09-2020ಕ್ಕೆ ಮುಕ್ತಾಯವಾಗಿದ್ದು, ಬಿ.ಬಿ.ಎಂ.ಪಿಯ ಪ್ರತಿ ವಾರ್ಡ್‌ಗೆ ನೋಡೆಲ್ ಅಧಿಕಾರಿ ನೇಮಕಾತಿ ಮತ್ತು ವಾರ್ಡ್ ಹಂತದ ಸಮಿತಿ ರಚಿಸಿದ್ದು, ವಾರ್ಡ್‌ಗೆ ಸಂಬಂಧಿಸಿದಂತೆ ಸಾರ್ವಜನಿಕರ ಹಿತರಕ್ಷಣೆ ಗಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಹ್ವಾನಿಸಿದ ಮಾನ್ಯ ಅಧ್ಯಕ್ಷರಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಸಮಿತಿಯ ಕಾರ್ಯದರ್ಶಿ ಸಭೆಗೆ ಸ್ವಾಗತ ಕೋರುತ್ತಾ ಸಮಿತಿಯ ಅಧ್ಯಕ್ಷರಾದ ಶ್ರೀ.ಮೊಹಮದ್ ಜಾವೀದ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು ಹಾಗೂ ಈ ಹಿಂದಿನ ಸಭೆಯ ನಡಾವಳಿಯ ನಿರ್ಣಯಗಳ ಬಗ್ಗೆ ಕೈಗೊಂಡ ಕಾರ್ಯವನ್ನು ಪರಿಶೀಲಿಸಲಾಯಿತು

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಬಂದಂತಹ ದೂರುಗಳು ಹಾಗೂ ತಕ್ಷಣ ಗ್ಯಾಂಗ್ ಮೆನ್ ಮತ್ತು ಟ್ರಾಕ್ಟರ್ ಮತ್ತು ಕೂಲಿ ಕಾರ್ಮಿಕರನ್ನು ಉಪಯೋಗಿಸಿಕೊಂಡು ತಕ್ಷಣ ದೂರುಗಳನ್ನು ಪರಿಶೀಲಿಸಿ ಕಾರ್ಯನಿರ್ವಹಿಸಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್-137ರ ವ್ಯಾಪ್ತಿಯಲ್ಲಿ ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ವಿವರವನ್ನು ನೀಡುವಂತೆ.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ 137 ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಎಸ್.ಸಿ/ಎಸ್‌ಟಿ ಜನ ಸಂಖ್ಯೆಯಿದ್ದು, ವಾರ್ಡ್‌ನಲ್ಲಿ ಎರಡು ವರ್ಷಗಳಿಂದ ಮತ್ತು ಹಳೆಯ ಫಲಾನುಭವಿಗಳು ಅರ್ಜಿ ಸಲ್ಲಿಸಿದ್ದು, ಎಸ್‌ಸಿ/ಎಸ್‌ಟಿ ಒಟ್ಟು 70 ಅರ್ಜಿಗಳು ಮತ್ತು ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರರು ಒಟ್ಟು 25 ಅರ್ಜಿಗಳನ್ನು ಸಲ್ಲಿಸಿರುವುದನ್ನು ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್ 137 ವ್ಯಾಪ್ತಿಯಲ್ಲಿ ಬರುವ ರಸ್ತೆಗಳಲ್ಲಿ ಗುಂಡಿ ಮುಚ್ಚುವಂತೆ ಮಾನ್ಯ ಶಾಸಕರು, ಚಾಮರಾಜ ಪೇಟೆ ವಿಧಾನ ಸಭೆ ಕ್ಷೇತ್ರ ರವರು ಸಭೆಯಲ್ಲಿ ವಾರ್ಡ್ ವ್ಯಾಪ್ತಿಯ ಅಡ್ಡರಸ್ತೆಗಳು ಮತ್ತು ಚಿಕ್ಕ ಪುಟ್ಟ ರಸ್ತೆಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ತಿಳಿಸಿದು, ರಸ್ತೆ ಗುಂಡಿಗಳನ್ನು ಗುರ್ತಿಸಿ ಗುಂಡಿಗಳನ್ನು ಮುಚ್ಚುವಂತೆ ಸೂಚಿಸಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್‌ನಲ್ಲಿ ಬರುವ ಅಡ್ಡರಸ್ತೆ ಮತ್ತು ಸಣ್ಣ ರಸ್ತೆಗಳಲ್ಲಿ ಬರುವ ರಸ್ತೆ ಗುಂಡಿಗಳನ್ನು ಗುರ್ತಿಸಿ, ತುರ್ತಾಗಿ ಕಾಮಗಾರಿ ನಿರ್ವಹಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ವಾರ್ಡ್-137ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಕೊರೆಸಿರುವ ಕೊಳವೆ ಬಾವಿಗಳನ್ನು ಗುರ್ತಿಸಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಗೆ ಹಸ್ತಾಂತರಿಸುವಂತೆ ಸೂಚಿಸಿದರು.

ಈ ವಿಷಯದ ಬಗ್ಗೆ ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಬಿ.ಬಿ.ಎಂ.ಪಿ ಕೊರೆಸಿರುವ

ಹಸ್ತಂತರಿಸಿಯುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಹೊಸದಾಗಿ [illegible] ಕೊಳವೆ ಭಾವಿಗಳನ್ನು ಗುರ್ತಿಸಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಹಸ್ತಾಂತರಿಸುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಕೋವಿಡ್-19 ಓಮಿಕ್ರಾನ್ ವೈರಸ್ ಹೆಚ್ಚಾಗುತ್ತಿರುವುದರಿಂದ ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಆರೋಗ್ಯ ಪರಿವೀಕ್ಷಕರು ವಾರ್ಡ್ 137ರ ವ್ಯಾಪ್ತಿಯಲ್ಲಿ ಕೋವಿಡ್-19 ಓಮಿಕ್ರಾನ್ ವೈರಸ್ ಹೆಚ್ಚಗುತ್ತಿರುವುದರಿಂದ ಸರ್ಕಾರಿ ಆದೇಶದಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು ಹಾಗೂ ಹೊಸ ವರ್ಷದ ಪ್ರಯುಕ್ತ 7 ದಿನಗಳ ಕಾಲ ನೈಟ್ ಕರ್ಫ್ಯೂ ವಿಧಿಸಿ ಸೊಂಕನ್ನು ತಡೆದಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು(ಬೆಸ್ಕಾಂ) ರವರ ಪ್ರತಿನಿದಿಯು ಸದರಿ ವಿಷಯದ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 137ರ ವ್ಯಾಪ್ತಿಯಲ್ಲಿ ಮಾಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

ವಾರ್ಡ್-137ರ ಮಾಷಲ್ ಗಳು ಒಟ್ಟು ವಿಧಿಸಿದ ದಂಡ ರೂ. 6000 ಎಸ್ ಡಬ್ಲೂಎಂ. ದಂಡ ರೂ. 14,000 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

ಅಧ್ಯಕ್ಷರು ಡಬ್ಲೂಎಸ್‌ಎಸ್‌ಬಿ ಕಛೆರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್‌ಎಸ್‌ಬಿ ಆಧಿಕಾರಿಗಳು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಮಾನ್ಯ ಅಧ್ಯಕ್ಷರು ವಾರ್ಡ್-137ರ ವ್ಯಾಪ್ತಿಯಲ್ಲಿ ಕೋವಿಡ್-19 ಕಾಯಿಲೆಯಿಂದ ಸತ್ತವರ ಪರಿಹಾರಕ್ಕಾಗಿ ಬಂದಿರುವಂತಹ ಅರ್ಜಿಗಳ ವಿವರವನ್ನು ಕೋರಿದರು.

ಹಿರಿಯ ಆರೋಗ್ಯ ಪರಿವೀಕ್ಷಕರು ರಾಯಪುರಂ ವ್ಯಾಪ್ತಿಯಲ್ಲಿ ಒಟ್ಟು 21 ಮೃತಪಟ್ಟಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು ಹಾಗೂ ವಾರ್ಡ್-137ರಲ್ಲಿ ಸುಮಾರು 10 ಕುಟುಂಬಗಳಿಗೆ ಚೆಕ್ ಮೂಲಕ ಪರಿಹಾರ ಧನವನ್ನು ನೀಡಿದರು.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ | | ಸಹಿ |
|---|---|---|---|
| 1 | ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತನಗರ ಉಪ ವಿಭಾಗ) ಬಿ.ಬಿ.ಎಂ.ಪಿ. ದೂ. ಸಂಖ್ಯೆ: 9845720286 | ಅಧ್ಯಕ್ಷರು ಮತ್ತು ವಾರ್ಡ್‌ನ ನೋಡಲ್ ಅಧಿಕಾರಿ | [signature] |
| 2 | ಶ್ರೀ ಗಿರಿಧರ್ ಸಹಾಯಕ ಅಭಿಯಂತರರು. ವಾರ್ಡ್ ಸಂಖ್ಯೆ: 137 ಬಿ.ಬಿ.ಎಂ.ಪಿ. ದೂ. ಸಂ 8618436036 | ಸದಸ್ಯ ಕಾರ್ಯದರ್ಶಿ | [signature] |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -137 | ಸದಸ್ಯರು | [signature] |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ರವರ ಪ್ರತಿನಿಧಿ ಶ್ರೀ ಬಾಬು (ಕೆಲಸ ಪರಿವೀಕ್ಷಕರು) ವಾರ್ಡ್-137. ದೂ. 9342582372 | ಸದಸ್ಯರು | [signature] |
| 5 | ಆರೋಗ್ಯಾಧಿಕಾರಿಗಳು. ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ಬಸವಲಿಂಗಯ್ಯ ದೂ. 9686418488 | ಸದಸ್ಯರು | [signature] SHI W-137 |
| 6 | ಶ್ರೀ ಸಿ. ಆರ್ ರವಿ ಪ್ರಸಾದ್ ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845802912 | ಸದಸ್ಯರು | |
| 7 | ಶ್ರೀ ರಿಜ್ವಾನ್. ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845262860 | ಸದಸ್ಯರು | |

| | | | |
|---|---|---|---|
| 8 | ಶ್ರೀ ರಾಜು, ದೂ.. 7676512877<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. | ಸದಸ್ಯರು | |
| 9 | ಶ್ರೀಮತಿ ಆಶಾ. ದೂ. 9731317223<br>ಕಂದಾಯ ಪರಿವೀಕ್ಷಕರು | ಸದಸ್ಯರು | RI-137 |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ | ಸದಸ್ಯರು | |
| 11 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ 9845444086<br>ಶ್ರೀ ಕುಮಾರ್ ಸ್ವಾಮಿ, ದೂ. 9060341644 | ಸದಸ್ಯರು | |
| 12 | ಸಹಾಯಕ ಕಾರ್ಯ ಪಾಲಕ ಅಭಿಯಂತರರು (ಬೇಸ್ಕಂ) ರವರ ಪ್ರತಿನಿಧಿ.<br>ದೂ. 9449840364 | ಸದಸ್ಯರು | |

ಕಾರ್ಯದರ್ಶಿಗಳು
ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 137
ವಾರ್ಡ್ ಹಂತದ ಸಮಿತಿ

5/1/2022
ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 137